ಅ) ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿಯ ಅವರಣದಲ್ಲಿ ಕಟ್ಟಲಾಗುತ್ತಿರುವ ಮಿನಿ ವಿಧಾನ ಸೌಧದ ಕಟ್ಟಡದ ಕೆಲಸ ಸ್ಥಗಿತಗೊಂಡಿರುವುದು ನಿಜವೆ?

ಆ) ಕೆಲಸ ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನ?

ಇ) ಈ ಮಿನಿ ವಿಧಾನ ಸೌಧ ಕಟ್ಟಡಕ್ಕೆ ಒಟ್ಟು ಮಂಜೂರಾದ ಹಣವೆಷ್ಟು? ಈವರೆಗೆ ಖರ್ಚು ಮಾಡಿದ ಹಣವೆಷ್ಟು? ಖರ್ಚು ಮಾಡದೇ ಉಳಿದ ಹಣವೆಷ್ಟು?

ಈ) ಸ್ಥಗಿತಗೊಂಡಿರುವ ಕಟ್ಟಡದ ಕೆಲಸ ಯಾವಾಗ ಪ್ರಾರಂಭ ಮಾಡಲಾಗುವುದು? ಇಲ್ಲವಾದರೆ ಕಾರಣವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಈ ಕೆಲಸವನ್ನು ಈಗ ಪುನರಾರಂಭಿಸಿದೆ.

ಆ) ಸದರಿ ಮಿನಿ ವಿಧಾನ ಸೌಧ ಕಟ್ಟಡದ ಪ್ರಸ್ತುತ ಇದ್ದ ಸಬ್ ಬೇಸ್‌ಮೆಂಟ್ ಮಹಡಿಯನ್ನು ಬೇಸ್‌ಮೆಂಟ್ ಮಹಡಿ ಎಂದು ಪರಿಗಣಿಸಿ ಅದರ ಮೇಲೆ ಎರಡು ಮಹಡಿಗಳನ್ನು ನಿರ್ಮಿಸಲು ತೀರ್ಮಾನಿಸಿದೆ ಕಾರಣ ಈ ಕಾಮಗಾರಿಯು ತಾತ್ಕಾಲಿಕವಾಗಿ ಸ್ಥಗಿತಗೊಂಡಿತ್ತು. ಈ ಎರಡು ಮಹಡಿಗಳ ಕಟ್ಟಡ ಕಾಮಗಾರಿಗೆ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಿ ಈಗಾಗಲೇ ಕಾರ್ಯಾದೇಶ ನೀಡಲಾಗಿದೆ. ಈ ಕಾಮಗಾರಿಯನ್ನು ದಿನಾಂಕ 8-7-2002 ರಂದು ಪುನರಾಂಭಿಸಲಾಗಿದೆ.

ಇ) 1) ಮಂಜೂರಾದ ಅಂದಾಜು ಮೊತ್ತ ರೂ. 330.00 ಲಕ್ಷಗಳು.

2) 2002 ಜೂನ್ ಅಂತ್ಯದವರೆಗೆ ಖರ್ಚು ಮಾಡಿದ ಮೊತ್ತ ರೂ. 147.87 ಲಕ್ಷಗಳು.

3) ಖರ್ಚು ಮಾಡದೆ ಉಳಿದ ಹಣ - ಇಲ್ಲ

ಈ) ಕಾಮಗಾರಿಯನ್ನು ದಿನಾಂಕ 8-7-2002 ರಂದು ಪ್ರಾರಂಭಿಸಲಾಗಿದೆ.

ಹುಬ್ಬಳ್ಳಿ, ಗಂಗಾಧರನಗರದಿಂದ ಮಂಟೂರುವರಿಗೂ ರಸ್ತೆ ಡಾಂಬರೀಕರಣ

215(295) ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್ ಖಾನ್ (ಹುಬ್ಬಳ್ಳಿ ನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಹುಬ್ಬಳ್ಳಿ, ಗಂಗಾಧರನಗರದಿಂದ ಮಂಟೂರ ವರೆಗೆ ರಸ್ತೆ ತುಂಬಾ ಕೆಟ್ಟಿರುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಈ ರಸ್ತೆಗೆ ನಬಾರ್ಡ್ ಇಲ್ಲವೆ ಲೋಕೋಪಯೋಗಿ ಇಲಾಖೆಯಿಂದ ಕೆಲಸ ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಬಂದಿದೆಯೇ?

3. ಈ ರಸ್ತೆಗೆ ತಗಲುವ ಅಂದಾಜು ವೆಚ್ಚ ಎಷ್ಟು?

4. ಈ ರಸ್ತೆಯ ಕೆಲಸಕ್ಕೆ ಅನುಮೋದನೆ ನೀಡಿ ಕೆಲಸ ಕೈಗೆತ್ತಿಕೊಳ್ಳುವಂತೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆಯೇ?

5. ಇಲ್ಲವಾದಲ್ಲಿ ಕಾರಣವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಬಂದಿದೆ. ಹುಬ್ಬಳ್ಳಿ ಗಂಗಾಧರನಗರದಿಂದ ಮಂಟೂರವರೆಗಿನ ರಸ್ತೆಯು ಹಳ್ಳಿ ರಸ್ತೆಯಾಗಿದ್ದು, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

2. ನಬಾರ್ಡ್ ಯೋಜನೆಯಡಿ ಈ ರಸ್ತೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಮನವಿ ಬಂದಿದೆ.

3. ಈ ಕಾಮಗಾರಿಗೆ ಸುಮಾರು ರೂ. 160.00 ಲಕ್ಷ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ.

4. ಇಲ್ಲ.

5. ಸದರಿ ಕಾಮಗಾರಿಗೆ ಸಚಿವ ಸಂಪುಟ ಉಪ ಸಮಿತಿಯ ಮತ್ತು ನಬಾರ್ಡ್‌ನ ಒಪ್ಪಿಗೆ ದೊರೆತ ನಂತರ ಕಾಮಗಾರಿಯನ್ನು ಕೈಗೊಳ್ಳಬೇಕಿರುತ್ತದೆ.

ರಾಜ್ಯದಲ್ಲಿ ಪ್ರವಾಸಿ ಕೇಂದ್ರಗಳ ಸ್ಥಳಗಳಲ್ಲಿ ಯಾತ್ರಾರ್ಥಿಗಳಿಗೆ ವಸತಿ ಸೌಲಭ್ಯ ಒದಗಿಸುವುದು

216 (261) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಯಾವ ಜಿಲ್ಲೆಗಳನ್ನು ಪ್ರವಾಸಿ ಜಿಲ್ಲೆಯೆಂದು ಘೋಷಿಸಲಾಗಿದೆ?

ಆ) ಘೋಷಿಸಿದ ಸ್ಥಳಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆಯೇ?

ಇ) ಪ್ರವಾಸಿ ಕೇಂದ್ರದ ಸ್ಥಳಗಳಲ್ಲಿ ಹೋಟೆಲ್, ಕಾಟೇಜ್, ಲಾಡ್ಜ್‌ಗಳನ್ನು ನಿರ್ಮಿಸುವುದಕ್ಕೆ ಸಬ್ಸಿಡಿ ನೀಡಲಾಗುವುದೆ?

ಈ) 2001-01, 2002-03ರಲ್ಲಿ ಪ್ರವಾಸಿ ಇಲಾಖೆಗೆ ಇದುವರೆವಿಗೂ ಬಂದಿರುವ ರಾಜ್ಯ ಸರ್ಕಾರದ ಅನುದಾನ ಎಷ್ಟು ಮತ್ತು ಕೇಂದ್ರ ಸರ್ಕಾರದ ಅನುದಾನ ಎಷ್ಟು?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) ರಾಜ್ಯದ ಯಾವ ಜಿಲ್ಲೆಯನ್ನೂ ಪ್ರವಾಸಿ ಜಿಲ್ಲೆಯೆಂದು ಘೋಷಿಸಿರುವುದಿಲ್ಲ. ರಾಜ್ಯದಲ್ಲಿ ಒಟ್ಟಾರೆ 254 ಪ್ರವಾಸಿ ಕೇಂದ್ರಗಳನ್ನು ಗುರುತಿಸಲಾಗಿದ್ದು ಇವುಗಳು ಎಲ್ಲಾ ಜಿಲ್ಲೆಗಳಲ್ಲೂ ಹರಡಿಕೊಂಡಿದೆ.